**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**22.08.2026 19.35**
**<><><><>**

ಮುಖ್ಯಾಂಶಗಳು

1. ಬ್ರಿಕ್ಸ್ ಪ್ರತಿನಿಧಿಗಳೊಂದಿಗೆ ವಿಶಾಖಪಟ್ಟಣಂ ಬಳಿ ಬೌದ್ಧ ಪಾರಂಪರಿಕ ತಾಣ ಸಂದರ್ಶಿಸಿದ ಸಚಿವ ಮನ್ಸುಖ್ ಮಾಂಡವಿಯಾ
2. ನಾಳೆಯಿಂದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಎರಡು ದಿನಗಳ ರಷ್ಯಾ ಭೇಟಿ
3. ಲೋಕ ಅದಾಲತ್: ಮೊದಲ ದಿನವೇ ೪೦೦ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿದ ಸುಪ್ರೀಂ ಕೋರ್ಟ್
4. ಟೆಸ್ಟ್ ಕ್ರಿಕೆಟ್: ಶ್ರೀಲಂಕಾ-ಭಾರತ ನಡುವಿನ ಎರಡನೇ ಪಂದ್ಯ ನಾಳೆ ಆರಂಭ

<><><><>

ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯಾ, ಕೆಲವು ಸಚಿವರು ಮತ್ತು ಬ್ರಿಕ್ಸ್ ದೇಶಗಳ ಹಿರಿಯ ಪ್ರತಿನಿಧಿಗಳೊಂದಿಗೆ ಆಂಧ್ರಪ್ರದೇಶದ ವಿಶಾಖಪಟ್ಟಣಂ ಬಳಿಯ ಐತಿಹಾಸಿಕ ತೋಟ್ಲಕೊಂಡ ಬೌದ್ಧ ಪರಂಪರೆಯ ಸ್ಥಳಕ್ಕೆ ಇಂದು ಭೇಟಿ ನೀಡಿದ್ದಾರೆ. ಮಹಾಸ್ತೂಪ, ಧ್ಯಾನ ಕೇಂದ್ರಗಳು, ಬಾವಿಗಳು ಮತ್ತು ಅಡುಗೆ ಮಾಡುತ್ತಿದ್ದ ಪ್ರದೇಶಗಳು ಸೇರಿದಂತೆ ಪ್ರಾಚೀನ ಬೌದ್ಧ ಅವಶೇಷಗಳನ್ನು ಪ್ರತಿನಿಧಿಗಳು ವೀಕ್ಷಿಸಿದರು. ಈ ಸ್ಥಳದ ಐತಿಹಾಸಿಕ ಮಹತ್ವ ಮತ್ತು ಶತಮಾನಗಳ ಹಿಂದೆ ಅಲ್ಲಿ ವಾಸಿಸುತ್ತಿದ್ದ ಬೌದ್ಧ ಸನ್ಯಾಸಿಗಳ ಜೀವನದ ಕುರಿತು ಅವರಿಗೆ ತಿಳಿಸಲಾಯಿತು. ತೋಟ್ಲಕೊಂಡದ ಶ್ರೀಮಂತ ಬೌದ್ಧ ಪರಂಪರೆಯನ್ನು ಕೇಂದ್ರ ಸಚಿವ ಮಾಂಡವಿಯಾ ಶ್ಲಾಘಿಸಿದರು. 'ಏಕ್ ಪೆಡ್ ಮಾ ಕೆ ನಾಮ್' ಅಭಿಯಾನದ ಭಾಗವಾಗಿ ತೋಟ್ಲಕೊಂಡದಲ್ಲಿ ಡಾ. ಮಾಂಡವಿಯಾ ಒಂದು ಸಸಿಯನ್ನು ನೆಟ್ಟರು.

<><><><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ನಾಳೆಯಿಂದ ಎರಡು ದಿನಗಳ ಕಾಲ ರಷ್ಯಾಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ಸಚಿವರು ಭಾರತ-ರಷ್ಯಾ ಅಂತರ-ಸರ್ಕಾರಿ ಆಯೋಗದ ವ್ಯಾಪಾರ, ಆರ್ಥಿಕ, ವೈಜ್ಞಾನಿಕ, ತಾಂತ್ರಿಕ ಮತ್ತು ಸಾಂಸ್ಕೃತಿಕ ಸಹಕಾರದ ೨೬ ನೇ ಅಧಿವೇಶನದ ಸಹ-ಅಧ್ಯಕ್ಷತೆ ವಹಿಸಲಿದ್ದಾರೆ. ಭೇಟಿಯ ಸಮಯದಲ್ಲಿ, ಡಾ. ಜೈಶಂಕರ್ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಅವರನ್ನು ಭೇಟಿ ಮಾಡಿ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ದೃಷ್ಟಿಕೋನಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ.

<><><><>

ದೇಶಾದ್ಯಂತ ವಂದೇ ಮಾತರಂ ರಾಷ್ಟ್ರೀಯ ಗೀತೆಯ ಕುರಿತು ಜಾಗೃತಿ ಮೂಡಿಸಲು ಮತ್ತು ಅದನ್ನು ಪಸರಿಸುವ ನಿಟ್ಟಿನಲ್ಲಿ ಬಿಜೆಪಿ ಪ್ರಚಾರ ಕಾರ್ಯವನ್ನು ಕೈಗೊಂಡಿದೆ. ಪಕ್ಷದ ಹೊಸ ರಾಷ್ಟ್ರೀಯ ಕಾರ್ಯಕರ್ತರನ್ನು ನೇಮಕ ಮಾಡಿದ ನಂತರ, ಮೊದಲ ಸಭೆಯಲ್ಲಿ ಈ ಕುರಿತು ನಿರ್ಧಾರವನ್ನು ತೆಗೆದುಕೊಳ್ಳಲಾಯಿತು ಎಂದು ಬಿಜೆಪಿ ವಕ್ತಾರ ಸಂಭಿತ್ ಪಾತ್ರ ನವದೆಹಲಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು. ನವದೆಹಲಿಯ ತಮ್ಮ ಕೇಂದ್ರ ಕಚೇರಿಯಲ್ಲಿ ವಂದೇ ಮಾತರಂ ಗಾಯನವನ್ನು ಮೊಟಕುಗೊಳಿಸಿದಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಸಂಭಿತ್ ಪಾತ್ರ ಟೀಕಿಸಿದ್ದಾರೆ. ರಾಷ್ಟ್ರೀಯ ಗೀತೆಯ ಮನ್ನಣೆಯನ್ನು ಅಲ್ಲಗೆಳೆಯುವ ಕಾಂಗ್ರೆಸ್ ಪ್ರಯತ್ನ ಸಫಲವಾಗುವುದಿಲ್ಲ. ಮಹತ್ಮಾ ಗಾಂಧಿ ಕೂಡ ವಂದೇ ಮಾತರಂ ಹಾಡುವ ಕುರಿತು ಮಾತನಾಡಿದ್ದರು. ಇದು ರಾಷ್ಟ್ರದ ಐಕ್ಯತೆಯ ಮಂತ್ರವಿದ್ದಂತೆ, ಇದರಲ್ಲಿ ಹಿಂದೂ ಮತ್ತು ಮುಸ್ಲಿಂರನ್ನು ಬೇರ್ಪಡಿಸುವ ಯಾವುದೇ ಅರ್ಥ ಹುದುಗಿಲ್ಲ ಎಂದು ಸಂಭಿತ್ ಪಾತ್ರ ಸ್ಪಷ್ಟಪಡಿಸಿದರು.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂದು ಸಿಲಿಗುರಿಯ ಸುಕ್ನಾದಲ್ಲಿ ಹಿರಿಯ ಗೂರ್ಖಾ ನಾಯಕರೊಂದಿಗೆ ಪ್ರಮುಖ ಸಭೆ ನಡೆಸಿದರು. ಸಭೆಯ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ದಾರ್ಜಿಲಿಂಗ್ ಲೋಕಸಭಾ ಸಂಸದ ರಾಜು ಬಿಸ್ತಾ, ಸಭೆಯು ಫಲಪ್ರದವಾಗಿದ್ದು, ಎಲ್ಲಾ ಗೂರ್ಖಾ ನಾಯಕರು ತಮ್ಮ ಸಮಸ್ಯೆಗಳನ್ನು ರಚನಾತ್ಮಕವಾಗಿ ಮಂಡಿಸಿದ್ದಾರೆ ಎಂದು ಹೇಳಿದರು. ಸಭೆಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸಹ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ಹಾಗೂ ಬದ್ಧತೆಯನ್ನು ವ್ಯಕ್ತಪಡಿಸಿದರು. ಸಭೆಯ ನಂತರ, ಬಿಎಸ್ಎಫ್‌ನ ಮಾಜಿ ನಿರ್ದೇಶಕ ಹಾಗೂ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಸಂಧಾನಕಾರ ಪಂಕಜ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗುವುದು ಎಂದು ಸಚಿವ ಅಮಿತ್ ಶಾ ಘೋಷಿಸಿದರು.

<><><><>

ಕೇರಳದ ಕೊಚ್ಚಿ ಮೂಲದ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ ಭಾರತೀಯ ನೌಕಾಪಡೆಗೆ, ಮೂರನೇ, ಆಳವಿಲ್ಲದ ನೀರಿನ ಜಲಾಂತರ್ಗಾಮಿ ವಿರೋಧಿ ಯುದ್ಧ ನೌಕೆ- ಮ್ಯಾಂಗ್ರೋವ್ ಅನ್ನು ಹಸ್ತಾಂತರಿಸಿದೆ. ಈ ಹಡಗು ಶೇಕಡಾ ೮೦ ಕ್ಕಿಂತ ಹೆಚ್ಚು ಸ್ಥಳೀಯ ತಂತ್ರಜ್ಞಾನವನ್ನು ಒಳಗೊಂಡಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇದು ಕರಾವಳಿಯಲ್ಲಿ ಜಲಾಂತರ್ಗಾಮಿ ವಿರೋಧಿ ಯುದ್ಧ ಕಾರ್ಯಾಚರಣೆಗಳು, ನೀರೊಳಗಿನ ಕಣ್ಗಾವಲು, ಕಡಿಮೆ-ತೀವ್ರತೆಯ ಸಮುದ್ರ ಕಾರ್ಯಾಚರಣೆಗಳು ಮತ್ತು ಗಣಿ ಯುದ್ಧ ಸಾಮರ್ಥ್ಯಗಳಿಗೆ ಸಜ್ಜುಗೊಂಡಿದೆ. ಈ ಹಡಗನ್ನು

ವಾಟರ್ ಜೆಟ್‌ಗಳಿಂದ ನಡೆಸಲಾಗುತ್ತದೆ ಮತ್ತು ಅತ್ಯಾಧುನಿಕ ಟಾರ್ಪಿಡೊಗಳು, ಜಲಾಂತರ್ಗಾಮಿ ವಿರೋಧಿ ರಾಕೆಟ್‌ಗಳು, ಜೊತೆಗೆ ಸುಧಾರಿತ ರಾಡಾರ್‌ಗಳು ಮತ್ತು ಸೋನಾರ್‌ಗಳನ್ನು ಇದು ಹೊಂದಿದೆ. ಈ ಹಡಗು ಸ್ಥಳೀಯ ರಕ್ಷಣಾ ಉತ್ಪಾದನಾ ಪರಿಸರ ವ್ಯವಸ್ಥೆಯ ಬೆಳೆಯುತ್ತಿರುವ ಬಲಕ್ಕೆ ಸಾಕ್ಷಿಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

<><><>

'ಸಮಾಧಾನ ಸಮಾರೋಹ' ಉಪಕ್ರಮದಡಿ ಕೈಗೊಳ್ಳಲಾದ ೩ ದಿನಗಳ ವಿಶೇಷ ಲೋಕ ಅದಾಲತ್‌ನ ಮೊದಲ ದಿನದಲ್ಲೇ ಸರ್ವೋಚ್ಚ ನ್ಯಾಯಾಲಯ ಸುಮಾರು ೪೦೦ ವ್ಯಾಜ್ಯಗಳನ್ನು ಪರಿಹರಿಸಿದೆ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವಂತಹ ವೈವಾಹಿಕ ಪ್ರಕರಣ, ಆಸ್ತಿ ವಿವಾದ, ಮೋಟಾರು ವಾಹನ ಅಪಘಾತ, ಭೂ ಒತ್ತುವರಿ ವಿವಾದ, ತೆರಿಗೆ ವಿವಾದ, ಸೇವೆ ಮತ್ತು ಕಾರ್ಮಿಕ ವ್ಯಾಜ್ಯಗಳು ಇವುಗಳಲ್ಲಿ ಪ್ರಮುಖವಾದವು. ನ್ಯಾಯ ಒದಗಿಸುವಿಕೆ ವ್ಯವಸ್ಥೆಯ ಪ್ರಮುಖ ಪಾತ್ರವಾದ ಮಧ್ಯಸ್ಥಿಕೆ ಮತ್ತು ಇತರ ಪರಿಹಾರ ವಿಧಾನಗಳನ್ನು ಬಳಸಿ, ಈ ಉಪಕ್ರಮದ ಮೂಲಕ ಪ್ರಕರಣಗಳ ಇತ್ಯರ್ಥವನ್ನು ಮುಂದುವರೆಸಲಾಗುವುದು ಎಂದು ಸರ್ವೋಚ್ಚ ನ್ಯಾಯಾಲಯ ತಿಳಿಸಿದೆ. ೧೬ ವಿಶೇಷ ಲೋಕ ಅದಾಲತ್ ಪೀಠಗಳಲ್ಲಿ, ೬೦೦ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಪ್ರತಿ ಪೀಠದಲ್ಲೂ ಇಬ್ಬರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ಹಿರಿಯ ವಕೀಲರು ಮತ್ತು ಇತರ ನ್ಯಾಯವಾದಿಗಳ ಸಹಾಯದೊಂದಿಗೆ ತ್ವರಿತ ಪ್ರಕರಣ ಇತ್ಯರ್ಥಕ್ಕಾಗಿ ಲೋಕ ಅದಾಲತ್‌ಗಳು ಕಾರ್ಯನಿರ್ವಹಿಸುತ್ತವೆ.

<><><>

ವಿಶೇಷ ಡಾಲರ್-ರೂಪಾಯಿ ವಿದೇಶಿ ವಿನಿಮಯ ಸ್ವ್ಯಾಪ್ ಸೌಲಭ್ಯವು ೨೦೨೬ರ ಆಗಸ್ಟ್ ೨೧ರ ವೇಳೆಗೆ ೭೨.೮೫ ಬಿಲಿಯನ್ ಅಮೆರಿಕನ್ ಡಾಲರ್ ವಿದೇಶಿ ವಿನಿಮಯ ಹರಿವನ್ನು ಪಡೆದುಕೊಂಡಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಇಂದು ತಿಳಿಸಿದೆ. ಒಟ್ಟು ಹರಿವಿನ ಪೈಕಿ ವಿದೇಶಿ ಕರೆನ್ಸಿ, ವಿದೇಶಿ ಬ್ಯಾಂಕ್ ಠೇವಣಿಗಳು ಗರಿಷ್ಠ ಪಾಲು ಹೊಂದಿದ್ದು, ಅವುಗಳ ಮೊತ್ತ ೬೫.೪ ಬಿಲಿಯನ್ ಯುಎಸ್ ಡಾಲರ್‌ಗಳಷ್ಟಾಗಿದೆ. ಇದೇ ವೇಳೆ, ವಿದೇಶಿ ಕರೆನ್ಸಿ ಸಾಲಗಳು ೪.೮೬ ಬಿಲಿಯನ್ ಅಮೆರಿಕ ಡಾಲರ್ ಹಾಗೂ ಬಾಹ್ಯ ವಾಣಿಜ್ಯ ಸಾಲಗಳು ೨.೫೯ ಬಿಲಿಯನ್ ಅಮೆರಿಕ ಡಾಲರ್ ಕೊಡುಗೆ ನೀಡಿವೆ. ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ದೇಶಕ್ಕೆ ಅಗತ್ಯವಿದ್ದಷ್ಟು ವಿದೇಶಿ ವಿನಿಮಯ ಹರಿದುಬಂದಿದ್ದರಿಂದ ಇದರ ಅವಧಿಯನ್ನು ಒಂದು ತಿಂಗಳು ಕಡಿತಗೊಳಿಸಲಾಯಿತು. ಈ ಯೋಜನೆಯು ಎಫ್‌ಸಿಎನ್‌ಆರ್‌ಬಿ ಠೇವಣಿಗಳಿಗೆ ೨೦೨೬ರ ಆಗಸ್ಟ್ ೩೧ರವರೆಗೆ ಮುಕ್ತವಾಗಿರುತ್ತದೆ.

<><><>

ಭಾರತದ ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಉಂಟಾಗುವ ಪ್ರವೇಶ ಮತ್ತು ಪ್ರಯೋಜನ ಹಂಚಿಕೆ ಕಾರ್ಯವಿಧಾನದ ಅಡಿಯಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ೨.೮೨ ಕೋಟಿ ರೂಪಾಯಿಗಳನ್ನು ರಾಜ್ಯಗಳಿಗೆ ವಿತರಿಸಿದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ವಿತರಿಸಿದ ಮೊತ್ತದಲ್ಲಿ ೨.೮೦ ಕೋಟಿ ರೂಪಾಯಿಗಳನ್ನು ೨೭ ರಾಜ್ಯ ಜೀವವೈವಿಧ್ಯ ಮಂಡಳಿಗಳು ಮತ್ತು ೩ ಕೇಂದ್ರಾಡಳಿತ ಪ್ರದೇಶದ ಜೀವವೈವಿಧ್ಯ ಮಂಡಳಿಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದೆ. ಕರ್ನಾಟಕದ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಗೆ ೨.೦೯ ಲಕ್ಷ ರೂಪಾಯಿಗಳನ್ನು ಇದೇ ಸಮಯದಲ್ಲಿ ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಮಾಡಲಾದ ಹಣವನ್ನು ಜನರ ಜೀವವೈವಿಧ್ಯ ನೋಂದಣಿಗಳ ದಾಖಲೀಕರಣ ಮತ್ತು ನವೀಕರಣ, ಜೀವವೈವಿಧ್ಯ ಸಂರಕ್ಷಣೆ, ಕ್ಷೀಣಿಸಿದ ಪರಿಸರ ವ್ಯವಸ್ಥೆಗಳ ಪುನಃಸ್ಥಾಪನೆ, ಜೀವವೈವಿಧ್ಯ ಪರಂಪರೆಯ ತಾಣಗಳ ಬಲವರ್ಧನೆ ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಾಮರ್ಥ್ಯ ವೃದ್ಧಿ ಸೇರಿದಂತೆ ಹಲವಾರು ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುವುದು ಎಂದು ಸಚಿವಾಲಯ ತಿಳಿಸಿದೆ.

<><><>

ಗಡಿ ರಾಜ್ಯವಾದ ಪಂಜಾಬ್‌ನಲ್ಲಿ ಭಾರತೀಯ ಸೇನೆಯು ಅತ್ಯಾಧುನಿಕ ಡ್ರೋನ್‌ಗಳ ತನ್ನ ಮೊದಲ ತುಕಡಿಯಾದ ಬಾಜ್ ಬೆಟಾಲಿಯನ್ ಅನ್ನು ಸ್ಥಾಪಿಸಿದೆ. ಆಕಾಶದಲ್ಲಿ ಸೇನೆಯ ಕಣ್ಣುಗಳಾಗಿ ಕಾರ್ಯನಿರ್ವಹಿಸುವ ಈ ತುಕಡಿಯು, ವೈಮಾನಿಕ ಚುರುಕುತನ, ತುರ್ತು ಸ್ಪಂದಿಸುವಿಕೆ ಮತ್ತು ಯುದ್ಧಭೂಮಿ ಸಹಾಯ ವ್ಯಾಪ್ತಿಯನ್ನು ಹೆಚ್ಚಿಸುತ್ತದೆ.

<><><>

ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರದಲ್ಲಿ ಹದಗೆಡುತ್ತಿರುವ ಪರಿಸ್ಥಿತಿಯ ನಡುವೆ ಮಧ್ಯಪ್ರವೇಶಿಸುವಂತೆ ಒತ್ತಾಯಿಸಿ ೭೦ಕ್ಕೂ ಹೆಚ್ಚು ಬ್ರಿಟಿಷ್ ಸಂಸದರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರಿಗೆ ಪತ್ರ ಬರೆದಿದ್ದಾರೆ. ಪಾಕಿಸ್ತಾನಿ ಪಡೆಗಳಿಂದ ಉಂಟಾಗುವ ರಕ್ತಪಾತವನ್ನು ಕೊನೆಗೊಳಿಸುವಂತೆ ಮತ್ತು ನಾಗರಿಕರ ಜೀವಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

<><><>

ಭಾರತದ ಬ್ರಿಕ್ಸ್ ಅಧ್ಯಕ್ಷತೆ ೨೦೨೬ರ ಅಡಿಯಲ್ಲಿ ಬ್ರಿಕ್ಸ್ ಯುವ ಸಚಿವರ ಸಭೆ ವಿಶಾಖಪಟ್ಟಣಂನಲ್ಲಿ ಇಂದು ನಡೆಯಿತು. ಡಾ. ಮನ್ಸುಖ್ ಮಾಂಡವಿಯಾ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ, ಯೋಗಕ್ಷೇಮ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿ, ಯುವ ಅಭಿವೃದ್ಧಿ ಮತ್ತು ಸಬಲೀಕರಣದಲ್ಲಿ ಸಹಕಾರವನ್ನು ಬಲಪಡಿಸುವ

ಮಾರ್ಗಗಳ ಕುರಿತು ಚರ್ಚಿಸಲಾಯಿತು. ಬ್ರಿಕ್ಸ್ ಕ್ರೀಡಾ ಸಚಿವರ ಸಭೆಯು ನಾಳೆ ವಿಶಾಖಪಟ್ಟಣದಲ್ಲಿ ನಡೆಯಲಿದ್ದು, ಕ್ರೀಡೆಯಲ್ಲಿ ಸಹಕಾರವನ್ನು ಬಲಪಡಿಸುವ ಬಗ್ಗೆ ಚರ್ಚೆಗಳು ನಡೆಯುವ ನಿರೀಕ್ಷೆಯಿದೆ. ಈ ಕಾರ್ಯಕ್ರಮಗಳು ರಾಷ್ಟ್ರಗಳ ನಡುವಿನ ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು, ಪ್ರಾಯೋಗಿಕ ಸಹಕಾರಕ್ಕಾಗಿ ಕ್ಷೇತ್ರಗಳನ್ನು ಗುರುತಿಸಲು ಮತ್ತು ಯುವಜನರ ಭಾಗವಹಿಸುವಿಕೆ, ಕ್ರೀಡಾ ಅಭಿವೃದ್ಧಿ ಮತ್ತು ಸಮಗ್ರ ಬೆಳವಣಿಗೆಯ ಕಡೆಗೆ ಸಾಮೂಹಿಕ ಪ್ರಯತ್ನಗಳನ್ನು ಬಲಪಡಿಸಲು ಪ್ರಮುಖ ವೇದಿಕೆಯನ್ನು ಒದಗಿಸುತ್ತವೆ.

<><><><>

ಶ್ರೀಲಂಕಾ ಹಾಗೂ ಭಾರತ ತಂಡಗಳ ನಡುವಿನ ೨ನೇ ಟೆಸ್ಟ್ ಪಂದ್ಯ ನಾಳೆ ಕೊಲಂಬೋದಲ್ಲಿ ಆರಂಭವಾಗಲಿದೆ. ಪಂದ್ಯ ಬೆಳಗ್ಗೆ ೧೦ಕ್ಕೆ ಆರಂಭವಾಗಲಿದೆ. ಎರಡು ಪಂದ್ಯಗಳ ಈ ಸರಣಿಯ ಮೊದಲ ಪಂದ್ಯದಲ್ಲಿ, ಶುಭಮನ್ ಗಿಲ್ ನಾಯಕತ್ವದ ಭಾರತ ೧೭೪ ರನ್‌ಗಳಿಂದ ವಿಜಯ ಸಾಧಿಸಿತ್ತು. ಎರಡನೇ ಪಂದ್ಯದಲ್ಲಿ ಗೆದ್ದು ಸರಣಿ ಕ್ಲೀನ್ ಸ್ವೀಪ್ ಮಾಡುವ ಗುರಿಯೊಂದಿಗೆ ತಂಡ ನಾಳೆ ಅಂಗಳಕ್ಕಿಳಿಯಲಿದೆ.

<><><><>

ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಬಿಡಬ್ಲ್ಯೂಎಫ್ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ, ಭಾರತದ ತ್ರಿಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಮಹಿಳಾ ಡಬಲ್ಸ್ ಸೆಮಿಫೈನಲ್‌ನಲ್ಲಿ ಐತಿಹಾಸಿಕ ಕಂಚಿನ ಪದಕವನ್ನು ಪಡೆದುಕೊಂಡಿತು. ಅಗ್ರ ಶ್ರೇಯಾಂಕಿತ, ಹಾಲಿ ಚಾಂಪಿಯನ್ ಲಿಯು ಶೆಂಗ್ ಶು ಮತ್ತು ಟ್ಯಾನ್ ನಿಂಗ್ ವಿರುದ್ಧ ಭಾರತೀಯ ಜೋಡಿ ಸೋಲೊಪ್ಪಿಕೊಂಡಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>